


ಪುಟ್ಟ ಬಾಲಕಿಯಿಂದ ಹಿಡಿದು ಅಜ್ಜಿಯವರೆಗೆ ಎಲ್ಲ ವಯೋಮಾನದ ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿರುವ ದಾರುಣ ಘಟನೆಗಳು ಪ್ರತಿದಿನ ನಮ್ಮ ನಡುವೆ ಸಂಭವಿಸುತ್ತಿವೆ. ಹೆಣ್ಣನ್ನು ಗಾಸಿಗೊಳಿಸುವುದರಲ್ಲಿ ವಿಕೃತಿಯನ್ನು ಮೈಗೂಡಿಸಿಕೊಂಡವರಂತೆ ಕೆಲವು ಪುರುಷಮೃಗಗಳು ವರ್ತಿಸುತ್ತಿವೆ. ದುರದೃಷ್ಟವಶಾತ್, ಅತ್ಯಾಚಾರಿಗಳಲ್ಲಿ ಬಹುತೇಕರು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಜಾತಿ, ಹಣ, ರಾಜಕೀಯ ಬಲಗಳ ಜೊತೆಗೆ, ಸಮಾಜದಲ್ಲಿನ ಪೂರ್ವಗ್ರಹಗಳು ಹಾಗೂ ಕಾನೂನು ಪ್ರಕ್ರಿಯೆ ಜರುಗಿಸಬೇಕಾದವರ ಇಚ್ಛಾಶಕ್ತಿಯ ಕೊರತೆ – ತಪ್ಪಿತಸ್ಥರು ಶಿಕ್ಷೆಯಿಂದ ಪಾರಾಗಲು ಕಾರಣಗಳಾಗಿವೆ. ಕಾನೂನು ಹೋರಾಟ ನಡೆಸುವ ಸಂದರ್ಭದಲ್ಲಿ ಸಂತ್ರಸ್ತೆಯರು ಎದುರಿಸಬೇಕಾದ ಸಾಲು ಸಾಲು ಸವಾಲುಗಳು, ಸಮಾಜದ ಸಂವೇದನೆ ಹಾಗೂ ಲಿಂಗಸೂಕ್ಷ್ಮತೆಗೆ ಗರಬಡಿದಿರುವುದಕ್ಕೆ ನಿದರ್ಶನದಂತಿವೆ. ಸವಾಲಿನ ಗಳಿಗೆಗಳನ್ನು ದಿಟ್ಟತನದಿಂದ ಎದುರಿಸಲು ಬೇಕಾದ ಅರಿವು ಒದಗಿಸುವ ಈ ಬರಹ, ಸಾಮಾಜಿಕ ಜಾಗೃತಿಯ ನಿಟ್ಟಿನಲ್ಲಿ ‘ಸುಧಾ ಕಾಳಜಿ’ಯೂ ಹೌದು.

■ ಮಂಜುಶ್ರೀ ಎಂ. ಕಡಕೋಳ